PAPER CLIPPINGS
DEPARTMENT / SUBJECT:
NAME OF THE NEWS PAPER:
DATE :

### ಭೂಸೇನೆಯ ನೂತನ ಮುಖ್ಯಸ್ಥರಾಗಿ ಅಧಿಕಾರ ಸ್ವೀಕಾರ | ಉಗ್ರರ ಮೂಲೋತ್ಪಾಟನೆಗೆ ಕಾರ್ಯಾಚರಣೆ

# ಮೊದಲ ದಿನವೇ ಪಾಕ್‌ಗೆ ಜ. ಮನೋಜ್ ವಾರ್ನಿಂಗ್

**ನವದೆಹಲಿ:** ಭೂಸೇನೆಯ ನೂತನ ಮುಖ್ಯಸ್ಥರಾಗಿ ಜನರಲ್ ಮನೋಜ್ ಮುಕುಂದ ನರವಾಣೆ ಮಂಗಳವಾರ ಅಧಿಕಾರ ಸ್ವೀಕರಿಸಿದರು. ನಿರ್ಗಮಿತ ಮುಖ್ಯಸ್ಥ ಜ. ಬಿಪಿನ್ ರಾವತ್ ಅಧಿಕಾರ ಹಸ್ತಾಂತರಿಸಿದರು. ನರವಾಣೆ ಮೊದಲ ದಿನವೇ ಪಾಕ್ ವಿರುದ್ಧ ಗುಡುಗಿದ್ದಾರೆ. ಉಗ್ರರ ಮೂಲೋತ್ಪಾಟನೆ ಮಾಡಲು ಕಾರ್ಯಾಚರಣೆ ನಡೆಸುವ ಅಧಿಕಾರ ನಮಗೆ ಇದೆ. ಭಯೋತ್ಪಾದಕರಿಗೆ ಪಾಕ್ ಕುಮ್ಮಕ್ಕು ನೀಡುವುದನ್ನು ನಿಲ್ಲಿಸದಿದ್ದರೆ ಪ್ರಾಯೋಜಿತ ಉಗ್ರವಾದಕ್ಕೆ ತಕ್ಕ ಶಾಸ್ತಿ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

**» ಯಾವುದೇ ಸನ್ನಿವೇಶವನ್ನು ಎದುರಿಸಲು ಸೇನೆ ಸಿದ್ಧವಾಗಿದೆ.**

ನಮ್ಮ ನೆರೆಯ ರಾಷ್ಟ್ರಕ್ಕೆ ಭಯೋತ್ಪಾನೆ ಒಂದು ಸರ್ಕಾರಿ ಸಾಧನವಾಗಿದೆ. ಈ ಮೂಲಕ ನಮ್ಮ ವಿರುದ್ಧ ಪರೋಕ್ಷ ಯುದ್ಧ ನಡೆಸುತ್ತಿರುತ್ತದೆ. ಇದು ದೀರ್ಘಕಾಲ ನಡೆಯದು. ಉಗ್ರವಾದದ ವಿರುದ್ಧ ವಿಶ್ವಸಮುದಾಯ ಒಂದಾಗುತ್ತಿದೆ.

ಯಾವುದೇ ಸನ್ನಿವೇಶವನ್ನು ಎದುರಿಸಲು ಸೇನೆ ಯಾವಾಗಲೂ ಸರ್ವ ಸನ್ನದ್ಧವಾಗಿರುತ್ತದೆ. ಸಂಘರ್ಷಗಳ ವಿರುದ್ಧ ಹೋರಾಟಕ್ಕೆ ಬಹು ಆಯ್ಕೆಯೂ ಇದೆ ಎಂದು ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ. ಚೀನಾ ಗಡಿಯಲ್ಲೂ ಸೇನಾ ಸಾಮರ್ಥ್ಯ ಹೆಚ್ಚಿಸುವ ಅವಶ್ಯಕತೆ ಇದೆ. ಉತ್ತಮ ಸಾಧನ- ಸಲಕರಣೆ ಹೊಂದುವುದು. ಅತ್ಯುತ್ತಮ ಕಾರ್ಯತಂತ್ರ ರೂಪಿಸುವ ಉದ್ದೇಶವಿದೆ ಎಂದು ಹೇಳಿದ್ದಾರೆ.

## ನಾಲ್ಕು ದಶಕದ ಅನುಭವ

**1980**ರ ಜೂನ್‌ನಲ್ಲಿ ಸಿಖ್ ಲೈಟ್ ಇನ್‌ಫೆಂಟ್ರಿ 7ನೇ ಬೆಟಾಲಿಯನ್‌ಗೆ ಕಮಿಷನ್ಡ್ ಅಧಿಕಾರಿಯಾಗಿ ಸೇನಾ ಸೇವೆ ಆರಂಭಿಸಿದ ನರವಾಣೆ, 39 ವರ್ಷ ಸುದೀರ್ಘ ಸೇವೆಯ ಅನುಭವ ಹೊಂದಿದ್ದಾರೆ. ಸೇನೆಯ ವಿವಿಧ ವಿಭಾಗಗಳು, ರೆಜಿಮೆಂಟ್‌ಗಳಲ್ಲಿ ಸೇವೆ ಸಲ್ಲಿಸಿರುವ ಅವರು, ವಿಶೇಷವಾಗಿ ಜಮ್ಮು-ಕಾಶ್ಮೀರ ಮತ್ತು ಈಶಾನ್ಯ ರಾಜ್ಯಗಳಲ್ಲಿ ಅಕ್ರಮ ಒಳನುಸುಳುಕೋರರ ವಿರುದ್ಧ ಕಾರ್ಯಾಚರಣೆಯಲ್ಲಿ ಮೆಚ್ಚುಗೆಯ ಕಾರ್ಯ ಮಾಡಿದ್ದಾರೆ. ಪರಮ ವಿಶಿಷ್ಟ ಸೇವಾ ಪದಕ ಸೇರಿ ಅನೇಕ ಶೌರ್ಯ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.



## ಕಾರ್ಯತಂತ್ರಕ್ಕೆ ರಾವತ್ ಒತ್ತು

**ದೇ**ಶದ ರಕ್ಷಣಾ ಪಡೆಗಳ ಮುಖ್ಯಸ್ಥ (ಸಿಡಿಎಸ್) ಜನರಲ್ ಬಿಪಿನ್ ರಾವತ್, ಯೋಜಿತ ಕಾರ್ಯತಂತ್ರಗಳ ಮೂಲಕ ದೇಶದ ರಕ್ಷಣೆಯನ್ನು ಬಲಗೊಳಿಸುವುದಾಗಿ ಹೇಳಿದ್ದಾರೆ. ಇದುವರೆಗೆ ನಾನು ಭೂಸೇನೆಯ ಮುಖ್ಯಸ್ಥನಾಗಿದ್ದೆ. ಆದರೆ, ಸಿಡಿಎಸ್ ಹಲವು ಹೊಣೆಗಾರಿಕೆಯನ್ನು ಒಳಗೊಂಡ ಹುದ್ದೆ. ಇದನ್ನು ಸಮರ್ಥವಾಗಿ ನಿಭಾಯಿಸಲು ಅಗತ್ಯ ಕಾರ್ಯತಂತ್ರವನ್ನು ರೂಪಿಸುವೆ. ಈ ಹುದ್ದೆಯಲ್ಲಿ ಜವಾಬ್ದಾರಿಯನ್ನು ಎಚ್ಚರಿಕೆಯಿಂದ ನಿರ್ವಹಿಸುವೆ ಎಂದು ಸುದ್ದಿಗಾರರಿಗೆ ತಿಳಿಸಿದ್ದಾರೆ. ಭೂಸೇನೆಯ ನೂತನ ಮುಖ್ಯಸ್ಥ ಮುಕುಂದ್ ನರವಾಣೆ ಸೇನೆಯ ಗೌರವನ್ನು ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯಲಿದ್ದಾರೆ ಎಂಬ ವಿಶ್ವಾಸವನ್ನು ರಾವತ್ ವ್ಯಕ್ತಪಡಿಸಿದ್ದಾರೆ. ಸಿಡಿಎಸ್ ಆಗಿ ಅಧಿಕಾರ ವಹಿಸಿಕೊಳ್ಳುವುದಕ್ಕೂ ಮೊದಲು ಜ.ರಾವತ್, ರಾಷ್ಟ್ರೀಯ ಯುದ್ಧ ಸ್ಮಾರಕಕ್ಕೆ ಭೇಟಿ ನೀಡಿ ಗೌರವ ಸಲ್ಲಿಸಿದರು. ಭೂಸೇನೆ ಮುಖ್ಯಸ್ಥ ಸ್ಥಾನದಿಂದ ನಿವೃತ್ತಿಯಾದ ಅವರಿಗೆ ಬೀಳ್ಕೊಡುಗೆ ನೀಡಲಾಯಿತು.

**» ದೇಶದ ಮೊದಲ ಸಿಡಿಎಸ್ ಆಗಿ ಪದಗ್ರಹಣ**

**» ರಾಷ್ಟ್ರೀಯ ಯುದ್ಧ ಸ್ಮಾರಕಕ್ಕೆ ಗೌರವ ಸಲ್ಲಿಕೆ**

## 28ನೇ ಮುಖ್ಯಸ್ಥ

**ಲೆ**ಫ್ಟಿನೆಂಟ್ ಜನರಲ್ ಆಗಿದ್ದ ಮುಕುಂದರನ್ನು ಕಳೆದ ತಿಂಗಳು ಭೂಸೇನೆ ಮುಖ್ಯಸ್ಥರಾಗಿ ನೇಮಕ ಮಾಡಲಾಗಿತ್ತು. ಡಿ. 31ರವರೆಗೂ ರಾವತ್ ಸೇವಾವಧಿ ಇದ್ದ ಕಾರಣ ಅವರು ಭೂ ಸೇನೆಯ 28ನೇ ಮುಖ್ಯಸ್ಥರಾಗಿ ಮಂಗಳವಾರ ಪದಗ್ರಹಣ ಮಾಡಿದರು. ಮುಕುಂದ್ ಅವರನ್ನು ಕಳೆದ ಸೆಪ್ಟೆಂಬರ್‌ನಲ್ಲಿ ಸೇನೆಯ ಉಪಮುಖ್ಯಸ್ಥರನ್ನಾಗಿ ನೇಮಿಸಲಾಗಿತ್ತು. ಅದಕ್ಕೂ ಮೊದಲು ಅವರು ಪೂರ್ವ ಕಮಾಂಡ್‌ನ ಮುಖ್ಯಸ್ಥರಾಗಿದ್ದರು.

**ಪುಣೆ ಮೂಲದವರು:** ಮಹಾರಾಷ್ಟ್ರದ ಪುಣೆ ಮೂಲದ ಮುಕುಂದ 1960 ಏಪ್ರಿಲ್ 22ರಂದು ಜನಿಸಿದರು. ಇವರ ತಂದೆ ವಾಯಪಡೆಯಲ್ಲಿ ವಿಂಗ್ ಕಮಾಂಡರ್ ಆಗಿ ನಿವೃತ್ತರಾಗಿದ್ದಾರೆ. ತಾಯಿ ಆಕಾಶವಾಣಿಯಲ್ಲಿ ಉದ್ಘೋಷಕಿಯಾಗಿದ್ದರು. ಪತ್ನಿ ವೀಣಾ ಶಿಕ್ಷಕಿಯಾಗಿದ್ದು, ಇಬ್ಬರು ಪುತ್ರಿಯರು ಇದ್ದಾರೆ. ಪ್ರಾಥಮಿಕ ಶಿಕ್ಷಣವನ್ನು ಪುಣೆಯಲ್ಲಿ ಕಲಿತ ನರವಾಣೆ, ಪುಣೆಯ ರಾಷ್ಟ್ರೀಯ ರಕ್ಷಣಾ ಅಕಾಡೆಮಿ ಮತ್ತು ಡೆಹ್ರಾಡೂನ್‌ನ ಭಾರತೀಯ ಸೇನಾ ಅಕಾಡೆಮಿ ವಿದ್ಯಾರ್ಥಿ. ಮದ್ರಾಸ್ ವಿವಿಯಿಂದ ರಕ್ಷಣಾ ಅಧ್ಯಯನದಲ್ಲಿ ಸ್ನಾತಕೋತ್ತರ ಪದವಿ ಮತ್ತು ಇಂದೋರ್‌ನ ದೇವಿ ಆದಿತ್ಯ ವಿಶ್ವವಿದ್ಯಾಲಯದಲ್ಲಿ ರಕ್ಷಣೆ ಮತ್ತು ನಿರ್ವಹಣಾ ವಿಷಯದಲ್ಲಿ ಎಂಫಿಲ್ ಗಳಿಸಿದ್ದಾರೆ.

## ಡಿಎಂಎ ರಚನೆ ಅಧಿಸೂಚನೆ

**ರ**ಕ್ಷಣಾ ಸಚಿವಾಲಯದ ಅಡಿಯಲ್ಲಿ ಸೇನಾ ವ್ಯವಹಾರ ಇಲಾಖೆ (ಡಿಎಂಎ) ರಚನೆಯ ಅಧಿಸೂಚನೆಯನ್ನು ಕೇಂದ್ರ ಸರ್ಕಾರ ಮಂಗಳವಾರ ಹೊರಡಿಸಿದೆ. ಡಿಎಂಎ ರಚನೆಗೆ ಕಳೆದ 24ರಂದು ನಡೆದ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಗಿತ್ತು. ಸಿಡಿಎಸ್ ರಾವತ್ ಪದನಿಮಿತ್ತವಾಗಿ ಡಿಎಂಎ ಕಾರ್ಯದರ್ಶಿಯೂ ಆಗಿರುತ್ತಾರೆ.

## ಮೂರೂ ಪಡೆಗಳ ಮುಖ್ಯಸ್ಥರದ್ದು ಒಂದೇ ಬ್ಯಾಚ್!

**ಭೂ,** ವಾಯು ಮತ್ತು ನೌಕಾ ಪಡೆಗಳ ಮುಖ್ಯಸ್ಥರು ರಾಷ್ಟ್ರೀಯ ರಕ್ಷಣಾ ಅಕಾಡೆಮಿಯಲ್ಲಿ (ಎನ್‌ಡಿಎ) ಒಂದೇ ಬ್ಯಾಚ್‌ನ ವಿದ್ಯಾರ್ಥಿಗಳು. ಭೂ ಸೇನೆ ನೂತನ ಮುಖ್ಯಸ್ಥ ಜನರಲ್ ಮುಕುಂದ ನರವಾಣೆ, ಏರ್ ಚೀಫ್ ಮಾರ್ಷಲ್ ರಾಕೇಶ್ ಕುಮಾರ್ ಸಿಂಗ್ ಭದೌರಿಯಾ ಮತ್ತು ಅಡ್ಮಿರಲ್ ಕರಂಬೀರ್ ಸಿಂಗ್ 1976ರ ಎನ್‌ಡಿಎಗೆ ಸೇರಿದ್ದರು. 44 ವರ್ಷಗಳ ನಂತರ ಈ ಮಿತ್ರರು ದೇಶದ ಮೂರೂ ಪಡೆಗಳ ಮುಖ್ಯಸ್ಥರಾಗಿ ಸಹೋದ್ಯೋಗಿಗಳಾಗಿದ್ದಾರೆ. ಈ ಮೂವರು 1980ರ ಜೂನ್- ಜುಲೈನಲ್ಲೇ ತಮ್ಮ ಸೇನಾ ಕಮಾಂಡ್‌ಗೆ ಕರ್ತವ್ಯಕ್ಕೆ ಸೇರಿದ್ದರು. ಕರಂಬೀರ್ ಸಿಂಗ್ ಕಳೆದ ಮೇ 31ರಂದು ನೌಕಾಪಡೆ ಮುಖ್ಯಸ್ಥರಾಗಿ ಅಧಿಕಾರ ಸ್ವೀಕರಿಸಿದರು. ಬದೌರಿಯಾ ಸೆ. 30ರಂದು ವಾಯುಪಡೆಯ ಮುಖ್ಯಸ್ಥರಾದರು. ಕರಂಬೀರ್ ಸಿಂಗ್ ಮತ್ತು ನರವಾಣೆ ಶಾಲಾ ಅವಧಿಯಿಂದಲೂ ಸಹಪಾಠಿಗಳು. ಎನ್‌ಡಿಎಯಲ್ಲಿ ಕಲಿತ ಒಂದೇ ಬ್ಯಾಚ್‌ನ ವಿದ್ಯಾರ್ಥಿಗಳು, ಏಕಕಾಲಕ್ಕೆ ಸೇನಾ ಕರ್ತವ್ಯಕ್ಕೆ ಸೇರುವುದು ಮತ್ತು ಒಂದೇ ಅವಧಿಯಲ್ಲಿ ತಾವು ಪ್ರತಿನಿಧಿಸುವ ಪಡೆಗಳ ಮುಖ್ಯಸ್ಥರಾಗುವುದು ಬಹಳ ಅಪರೂಪದ ವಿದ್ಯಮಾನ. ಇದೇ ರೀತಿ ಸನ್ನಿವೇಶ 1990ರ ದಶಕದ ಅವಧಿಯಲ್ಲೂ ಇತ್ತು. ಎನ್‌ಡಿಎಯಲ್ಲಿ ಸಹಪಾಠಿಗಳಾಗಿದ್ದ ಜನರಲ್ ಎಸ್.ಎಫ್ .ರೊಡ್ರಿಕ್ಸ್, ಏರ್ ಚೀಫ್ ಮಾರ್ಷಲ್ ಎನ್.ಸಿ. ಸೂರಿ ಮತ್ತು ಅಡ್ಮಿರಲ್ ಎಲ್.ರಾಮದಾಸ್ ಒಂದೇ ಅವಧಿಯಲ್ಲಿ ಮೂರೂ ಪಡೆಗಳ ಮುಖ್ಯಸ್ಥರಾಗಿದ್ದರು.